Regd. No. M 1299 SATYAVADI Fonnded 1917

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 30 ಸಂಚಿಕೆ 24 | ಬುಧವಾರ 25—9—46 | ಬಿಡಿ ಪ್ರತಿ 6 ಪೈ

‘ ಪಾಕೀಸ್ತಾನ ’ ಕೇಳಿಕೆ
‘ ರಷ್ಯಾ ’ ಸಹಾಯ ಬೇಡಿಕೆ

ಪೌರಸಭೆ

ನೆಹರೂ ಭಾಷಣ ಪ್ರಸಂಗ

ಮೈಸೂರು, ಸೆ 23 — ಪೌರಸಭೆಯ ಅಧ್ಯಕ್ಷರಾದ ಶ್ರೀ ರಾವ್ ಜಂಪ್ಪ ರಾವ್ ಬಾಂಭೋರೆಯವರ ಅಧ್ಯಕ್ಷತೆಯಲ್ಲಿ ಪೌರಸಭೆಯ ಸಾಮಾನ್ಯ ಸಭೆ ಈ ದಿವಸ ಸೇರಿದ್ದಿತು. ಪೌರಸಭೆಯ ಅಧಿಕಾರ ವರ್ಗವೆಲ್ಲವೂ ಸಭೆಯಲ್ಲಿ ಹಾಜರಿದ್ದಿತು.

ಸಭೆಯು 4 ಗಂಟೆಗೆ ಪ್ರಾರಂಭವಾಯಿತು. ಕಳೆದ ತಾ || 2 ರಲ್ಲಿ ಪ್ರಧಾನ ನೆಹರೂ ಭಾಷಣವೇರ್ಪಟ್ಟದ್ದಾಗ್ಯೂ, ಹಲವು ಸಾರ್ವಜನಿಕ ರೇಡಿಯೋಗಳಲ್ಲಿ ಏಕೆ ಭಾಷಣ ಕೇಳಿ ಒರದಲ್ಲಿ ಎಂಬುದಾಗಿ ಕಾಂಗ್ರೆಸ್ ಪಕ್ಷದ ಸದಸ್ಯರಾದ ಶ್ರೀ ಸತ್ಯನಾರಾಯಣರಾಯರು ಪ್ರಶ್ನೆ ಕೇಳಿದ್ದರು. ಆ ಪ್ರಶ್ನೆ ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿರಲಿಲ್ಲ. ಆ ಪ್ರಶ್ನೆಯನ್ನೇಕೆ ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಸಲಿಲ್ಲವೆಂದು ಅಧ್ಯಕ್ಷರನ್ನು ಕಾಂಗ್ರೆಸ ಪಕ್ಷ ಪ್ರಶ್ನೆ ಕೇಳಿತು.

ಶ್ರೀ ಮಹಮದ್ ಸೇಟರು ‘ ಪಂ || ನೆಹರು ಭಾಷಣ ಕೇಳಬಾರದೆಂದೇನೂ ಆಕಾಶವಾಣಿ ಪ್ರಯತ್ನಿಸಲಿಲ್ಲ. ಪಂ || ನೆಹರೂ ಭಾಷಣ ಅತಿ ಮುಖ್ಯವಾದದ್ದು ಆದರೆ, ಕಳೆದು ಹೋದ ವಿಷಯ; ಚಿಂತಿಸಿ ಫಲವಿಲ್ಲ. ಆದುದರಿಂದ ಮುಂದಿನ ಕಾರ್ಯಕ್ರಮಗಳನ್ನು ಕೈಗೊಳ್ಳೋಣ ’ ಎಂದು ತಿಳಿಸಿದರು.

ಶ್ರೀಮತಿ ಥಿಯೋಬಾಲ್ಡರು ಮತ್ತು ಮತ್ತೊಬ್ಬ ಸದಸ್ಯರು ಅದನ್ನೇ ಒತ್ತಿ ಹೇಳಿದರು.

‘ ರೇಡಿಯೋ ವಿಷಯ ನಮಗೆ ತಿಳಿದುಬಂದಿದ್ದು ಈಗಲೇ. ಅದನ್ನು ಕಾರ್ಯಕ್ರಮ ಪಟ್ಟಿಯಲ್ಲಿ ಪ್ರಕಟಿಸಬೇಕಿತ್ತು ’ ಎಂಬುದಾಗಿ ಉಳಿದ ಸದಸ್ಯರು ತಿಳಿಸಿದರು.

‘ ಆ ಪ್ರಶ್ನೆ ಅಧ್ಯಕ್ಷರ ಬಳಿಯಿದೆ. ಈಗಲೂ ಸಹಾ ಅದನ್ನು ಕಾರ್ಯಕ್ರಮ ಪಟ್ಟಿಯಲ್ಲಿಸೇರಿಸಿಕೊಳ್ಳಬಹುದು ’ ಕಾಂಗ್ರೆಸ್ ಪಕ್ಷ ತಿಳಿಸಿತು.

‘ ಸಾಧ್ಯವಿಲ್ಲ ’ ಎಂಬುದಾಗಿ ಉಳಿದ ಸದಸ್ಯರು ಹೇಳಿದರು.

‘ ಕೇವಲ ಇದೊಂದೇ ಸಮಸ್ಯೆಯ ವಿಷಯದಲ್ಲಿ ಒಂದೂವರೆ ಗಂಟೆ ಕಾಲ ಚರ್ಚೆ ನಡೆಸುವುದು ಸೂಕ್ತವಲ್ಲ. ನಾನು ಮುಕ್ತಾಯ ನಿರ್ಣಯವನ್ನು ಸೂಚಿಸಬಯಿಸುತ್ತೇನೆ ’ ಎಂಬುದಾಗಿ ಶ್ರೀ ಮಹಮದ್ ಸೇಟರು ಹೇಳಿದರು.

‘ ಐದು ನಿಮಿಷಗಳ ಕಾಲ ಹೊಳಗೆ ಹೋಗಿದ್ದು ಬಂದು ಬಿಡಿ. ದಸರ ಆರಂಭವಾಗಲಿರುವುದರಿಂದ ಬಹಳ ಕಾರ್ಯವಿದೆ. ಮತ್ತೊಂದು ದಿನ ಸಭೆ ಸೇರಲು ತೊಂದರೆಯಾಗಬಹುದು ’ ಎಂದು ಅಧ್ಯಕ್ಷರು ಕಾಂಗ್ರೆಸ್ ಪಕ್ಷವನ್ನು ಕುರಿತು ಹೇಳಿದರು.

‘ ಅದು ಅಸಾಧ್ಯ. ನೀವೆ ಸಭೆ ಸೇರವಂತೆ ಮತ್ತೊಂದು ದಿನ ಗೊತ್ತು ಪಡಿಸಿ ’ ಎಂದು ಕಾಂಗ್ರೆಸ್ ಪಕ್ಷ ಉತ್ತರವಿತ್ತಿತು.

ಇದೇ ತಾ || 29 ರ ಬೆಳಿಗ್ಗೆ 9 ಗಂಟೆಗೆ ಸಭೆ ಮುಂದುವರಿಯಿತು.

ಐದೂವರೆಗೆ ಸಭೆ ಮುಗಿಯಿತು.

೨೦೦ ರೂ ಬಹುಮಾನ

ಸಿರಸಿ ಸಿದ್ದಾಪುರ ತಾಲೂಕಿನ ಕೆಲವು ಭಾಗಗಳಲ್ಲಿ ಒಂದು ನರ ಭಕ್ಷಕ ಶ್ವಾಪದದ ಹಾವಳಿ ನಡೆದಿದ್ದು ಅದು ಈಗಾಗಲೇ ಏಳು ಜನರನ್ನು ಅನೇಕ ದನಕರುಗಳನ್ನೂ ಮುರಿದು ತಿಂದಿದೆ. ಅದನ್ನು ಹೊಡೆದು ಕೊಲ್ಲುವವರಿಗೆ ಕಾರವಾರದ ಕಲೆಕ್ಟರರು 200 ರೂಪಾಯಿಗಳ ಪಾರಿತೋಷಕ ಕೊಡುವುದಾಗಿ ಸಾರಿದ್ದಾರೆ.

ಹಸಿವೆಯಿಂದ ಸಾಯದಂತೆ ಸರಕಾರದ ಎಚ್ಚರಿಕೆ

ಮದರಾಸು ಸೆ 18— ಎಲ್ಲಿಯೂ ಯಾವನೊಬ್ಬನೂ ಆಹಾರವಿಲ್ಲದೆ ಹಸಿವೆಯಿಂದ ಸಾಯದಂತೆ ಎಲ್ಲಾ ವಿಧದ ಎಚ್ಚರಿಕೆ ತೆಗೆದುಕೊಳ್ಳಬೇಕು ಎಂದು ಮದರಾಸು ಸರಕಾರವು ಜಿಲ್ಲಾ ಕಲೆಕ್ಟರಿಗೂ, ಜಿಲ್ಲಾ ಬೋರ್ಡು ಮತ್ತು ಮುನಿಸಿಪಾಲಿಟಿಗಳಿಗೂ ಎಚ್ಚರಿಸಿದೆ.

ನೇತಾಜಿಯು

ಇಫಿ ಫಕೀರನ ಸಂಗಡ ಇರುವರು

ಕರಾಚಿ, ಸ 21 — ‘ ಸುಭಾಷ ಚಂದ್ರ ಬೋಸರು ಇಫಿ ಫಕೀರನ ಅತಿಥಿಯಾಗಿರುವರು. ಅವರು ಆರೋಗ್ಯದಿಂದಿದ್ದಾರೆ ’ ಎಂಬುದಾಗಿ ಫಾರ್ವರ್ಡ್ ಬ್ಲಾಕಿನ ಪತ್ರಿಕೆ ‘ ಟುಮಾರೊ ’ ಈ 9 ನೇ ತಾರೀಖು ಸಂಚಿಕೆಯಲ್ಲಿ ನೇತಾಜಿಯ ಹಸ್ತಾಕ್ಷರ ಪತ್ರದೊಡನೆ ಪ್ರಕಟಿಸಿದಾರೆ.

ಪಂ || ನೆಹರು

ನವದೆಹಲಿ, ಸೆ 23 — ‘ ನಮಗೆ ಬೇಕಿರುವುದು ಶಾಂತಿ; ಸಂಗ್ರಾಮವಲ್ಲ ’ ಎಂಬುದಾಗಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ಪಂ || ನೆಹರು ಅಧ್ಯಕ್ಷ ಪದವಿ ತ್ಯಜಿಸಿದಾಗ ಹೇಳಿದರು.

ವಿ. ವಿ. ಪ್ರಚಾರೋಪನ್ಯಾಸ

ಮೈಸೂರು ಸೆ 25— ಮೈಸೂರು ಇಂಟರ್ಮೀಡಿಯೇಟ್ ಕಾಲೇಜಿನ ಲೆಕ್ಚರರಾದ ಶ್ರೀ ಬಿ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ಯರು ತಾ || 29 ರ ಸಂಜೆ ಜನ್ನಪಟ್ಟಣದ ಪುರಭವನದಲ್ಲಿ ‘ ಮೈಗಾಸ್ಮೀಸ್ ’ ವಿಷಯವಾಗಿ ಭಾಷಣ ಮಾಡುವರು.

ಅಖಿಲ ಭಾರತ ಭಾವಸಾರ ಕ್ಷತ್ರಿಯ ಮಹಾಸಭೆ

ಮೈಸೂರು ಸೆ 25— ಅಖಿಲ ಭಾರತ ಭಾವಸಾರ ಕ್ಷತ್ರಿಯ ಮಹಾಸಭೆಯ ಕಾರ್ಯಕಾರಿ ಸಮಿತಿ ಸಭೆಯು ಅಕ್ಟೋಬರ್ ತಾ || 2 ರಲ್ಲಿ ಒಂಟಿಕೊಪ್ಪಲಿನಲ್ಲಿ ವಿಶೇಷವಿಹಾರದಲ್ಲಿ ನಡೆಯುವುದೆಂದು ಅಧ್ಯಕ್ಷರು ತಿಳಿಸಿರುತ್ತಾರೆ.

ಪ್ರಚಲಿತ ವರ್ತಮಾನ

ಲೀಗಿನ ನೇರ ಕಾರ್ಯಾಚರಣೆಯಲ್ಲಿ ಖಿಯಾ ಪಂಗಡ ಭಾಗವಹಿಸುವುದಿಲ್ಲವಂತೆ.

ಬಿಹಾರ್ ಸೆ 23 — ಸಾಟ್ನಾದ ಪೋಲಿಸರು ಮತ್ತು ಮಿಲ್ಟ್ರಿ ಪೋಲೀಸರು ಸಂಬಳ ಮುಂತಾದ ಸೌಕರ್ಯಗಳು ಸರಿಯಿಲ್ಲವೆಂದು 24 ಗಂಟೆ ಉಪವಾಸ ವ್ರತಾಚರಣೆ ಹೂಡಿದ್ದರು 2 ಪೋಲೀಸರು ರಜಾ ಮಾಡಲ್ಪಟ್ಟರು.

ಲಂಡನ್ 23 — ಬಿಲ್ಲ್ರೀಡಿನ ರೂಟಂ ಪ್ರತಿನಿಧಿ ದಸ್ತಗಿರಿ ಮಾಡಲ್ಪಟ್ಟಿದ್ದಾನೆ.

ಪ್ರಪಂಚದಲ್ಲಿ ಭಾರತದ ಸ್ಥಾನ

ನವದೆಹಲಿ ಸೆ 24 — ಎ. ಐ. ಸಿ. ಸಿ. ಯಲ್ಲಿ ಪಂ|| ನೆಹರು ಭಾಷಣ ಮಾಡುತ್ತಾ ಪ್ರಪಂಚ ಪರಿಸ್ಥಿತಿಯಲ್ಲಿ ಭಾರತ ಸ್ವತಂತ್ರ ಸ್ಥಾನ ಪಡೆಯುವುದೆಂದು ತಿಳಿಸಿದರು.

ರಷ್ಯಾದೊಡನೆ ನಮಗೆ ಕದನವಿಲ್ಲ ಕಮ್ಯೂನಿಸ್ಟರೊಡನೆ – ಎಂಬುದಾಗಿ ಪಂ|| ನೆಹರು ಸ್ಪಷ್ಟಪಡಿಸಿದರು.

ಪಾಕೀಸ್ತಾನ ಬೇಡಿಕೆಗೆ ರಷ್ಯಾ ಬೆಂಬಲ ವೀಯುವುದೇ ?

ಲಂಡನ್ ಸೆ 24 — ಸಂಯುಕ್ತ ಜನಾಂಗ ಸಭೆ ಮತ್ತು ಶಾಂತಿ ಪರಿಷತ್ತು ಇವುಗಳಲ್ಲಿ ಮುಸ್ಲಿಂರ ‘ ಪಾಕೀಸ್ತಾನ ’ ಹಕ್ಕನ್ನು ಎತ್ತಲು ಸೋವಿಯಟ್ ರಷ್ಯಾ ಬೆಂಬಲ ಕೊಡಬೇಕೆಂದು ಕೋರಲು ರಷ್ಯಾ ಪ್ರತಿನಿಧಿ ಎಂ. ಮಾಸ್ಕಾವಂನ್ನು ಕಾಣತ್ತೇನೆಂಬ ಭರವಸೆಯಿಂದ ಸಿಂಧ್ ಪ್ರಾಂತದ ಮುಸ್ಲಿಂ ಲೀಗಿನ ಅಧ್ಯಕ್ಷ ಯುಸೂಫ್ ಹರೂಣ್ ಗುರುವಾರ ಪ್ಯಾರಿಸ್ಸಿಗೆ ಹೋಗುವರು. ‘ ಪಾಕೀಸ್ತಾನ ಪ್ರಚಾರ ಮತ್ತು ವಿವರಣೆಯ ಸಲುವಾಗಿ ಪ್ರಬಲ ಪ್ರಾತಿನಿಧ್ಯವನ್ನು ಲೀಗ್ ರಷ್ಯಾಕ್ಕೆ ಕಳಿಸುವುದು ’ ಎಂದು ಹರೂಣ್ ತಿಳಿಸಿದರು.

ಅಕ್ಕಿಯಲ್ಲಿ ಮತ್ತಷ್ಟು ಖೋತಾ

ನವದೆಹಲಿ ಸೆ 23 — ಕೇಂದ್ರ ತಾತ್ಕಾಲಿಕ ಆಹಾರ ಮಂತ್ರಿ ರಾಜೇಂದ್ರ ಪ್ರಸಾದ್ ಆಕಾಶವಾಣಿ ಭಾಷಣದಲ್ಲಿ ಅಕ್ಕಿಯಲ್ಲಿ ಮತ್ತಷ್ಟು ಖೋತಾ ಅವಶ್ಯಕವೆಂದು ಮುಂದಿನ ಮೂರು ತಿಂಗಳಿನಲ್ಲಿ ಆಹಾರ ಸ್ಥಿತಿ ಉಲ್ಬಣಿಸುವುದೆಂದೂ ತಿಳಿಸಿದರು.

ಎ. ಐ. ಸಿ. ಸಿ. ಯಲ್ಲಿ ಗಾಂಧೀಜಿ

ನವದೆಹಲಿ ಸೆ 24 — ಪಂ|| ನೆಹರುರವರು ಚರ್ಚೆಗೆ ಉತ್ತರವೀಯುತ್ತಿದ್ದಾಗ ಗಾಂಧೀಜಿ ಎ. ಐ. ಸಿ. ಸಿ. ಗೆ ಬಂದಿದ್ದರು.

ತಾತ್ಕಾಲಿಕ ಸರ್ಕಾರ ಸಚಿವರು ಕಾರ್ಯಕಾರಿ ಸಮಿತಿಯಲ್ಲಿರಬಹುದು

ನವದೆಹಲಿ ಸೆ 24 — ತಾತ್ಕಾಲಿಕ ಸರ್ಕಾರದ ಸಚಿವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿರಬಹುದೆಂದು ತೀರ್ಮಾನವಾಯಿತು.

ನವದೆಹಲಿ ಸೆ 24 — ನಾಳೆ ಸಂಜೆ 5—30 ಗಂಟೆಗೆ ಜಿನ್ನಾ—ವೈಸ್ರಾಯಿ ಭೇಟಿ ಜರಗುವುದು.

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್

ಶ್ರೀ ಕೃಷ್ಣರಾಜೇಂದ್ರ ಮಿಲ್ಸಿನ ಚಾಲ್ತಿ ವರ್ಷದ ಡೈರೆಕ್ಟರುಗಳಿವರು—ರಾಜಸೇವಾಪ್ರಸಕ್ತ ಎಂ ಎಸ್. ರಾಮಚಂದ್ರರಾವ್, ಧರ್ಮಪ್ರಕಾಶ ಎಲ್ ವೆಂಕೋಜಿರಾವ್, ರಾಜಕಾರ್ಯಪ್ರಸಕ್ತ ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿ ರಾಜಸೇವಾಸಕ್ತ ಸಿ. ನರಸಿಂಹಯ್ಯ. ಶ್ರೀ ಡಿ. ಬಿ. ವಿಶ್ವಂಭರಯ್ಯ, ಶ್ರೀ ಜಿ. ಕೃಷ್ಣಸ್ವಾಮಿ. ಶ್ರೀ ಪಿ. ಹನುಮಂತಪ್ಪ ಪಿರಿಯಾಪಟ್ಟಣ, ಶ್ರೀ ಎ. ಕೆ. ರಂಗರಾವ, ಧರ್ಮಪ್ರವರ್ತ ಡಾ || ಟಿ. ಎಸ್' ಸಿದ್ದಪ್ಪ, ಹಜ'. ಸಂಜುಂಡಯ್ಯ.

ಸಿಟಿ ಕೊಆಪರೇಟಿವ್ ಬ್ಯಾಂಕ್

ಮೈಸೂರು ಸಿಟಿ ಕೊಆಪರೇಟಿವ್ ಬ್ಯಾಂಕಿಗೆ ಈ ಸಾಲಿಗೆ ರಾಜಸೇವಾಸಕ್ತ ಶ್ರೀ ಸಿ ನರಸಿಂಹಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ಡಿ. ಗುಂಡಪ್ಪನವರು ಉಪಾಧ್ಯಕ್ಷರಾಗಿಯೂ, ಶ್ರೀ ಬಿ. ವಿ. ನಂಜುಂಡಯ್ಯನವರು ಕಾರ್ಯದರ್ಶಿಗಳಾಗಿಯೂ ಚುನಾಯಿಸಲ್ಪಟ್ಟಿದ್ದಾರೆ.

ಇನಾಂ ಕೊಡಲಾಗುತ್ತೆ

ಕಳ್ಳಪೇಟೆಯ ಬಗ್ಗೆ ನಿಶ್ಚಿತ ಹಾಗೂ ವಿಶ್ವಸನೀಯವಾದ ಸುದ್ದಿಗಳನ್ನು ಕೊಡುವವರಿಗೆ ಇನಾಮುಗಳನ್ನು ಕೊಡುವದಕ್ಕೆಂದು ಸರಕಾರದವರಿಂದ 1 ಸಾವಿರ ರೂ. ಗಳವರೆಗೆ ಹಣ ಕಲೆಕ್ಟರರ ಕಡೆ ಬಂದಿದೆಯೆಂದು ತಿಳಿದುಬರುತ್ತದೆ. ಈ ತರದ ಸುದ್ದಿಗಳನ್ನು ಕೊಡುವವರ ಹೆಸರುಗಳನ್ನು ಗುಪ್ತವಾಗಿಡಲಾಗುವುದಂತೆ. ಇದು ಬೆಳಗಾವಿನ ಸಮಾಚಾರವು.

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು
— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯೆನ್ನು ತಿಳಿಯಲಾರಿರಿ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು ಸಾಬೂನು

ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದ

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ty Ranjit

4 th Glorious Week

Anmol Ghadi

ನೂರ್‌ಜಹಾನ್ — ಸುರೇಂದ್ರ
ಜಹರ್ ರಾಜಾ — ಸುರಿಯ
ಪಾತ್ರವಹಿಸಿರುವ

ಅನ್ಮೋಲ್ ಘಡಿ

(ಅಮೂಲ್ಯ ಗಡಿಯಾರ)

Edited, Printed and Published by M. S. Krishna Rao at the Satyavadi Press, Chamaraja Agrahar, Mysore,

॥ವಂದೇಮಾತರಂ॥
ಶ್ರೇಷ್ಠವಾದ
ರಾಜಪುರಿ ಹೊಗೇಸೊಪ್ಪಿನಿಂದ
— ತಯಾರಿಸಲ್ಪಟ್ಟ —

ಕಾಂಗ್ರೆಸ್

(ರಿಜಿಸ್ಟರ್ಡ್)
ಮಂಗಳೂರು
ಬೀಡಿಗಳು

ಜೆ. ಎಸ್. ಟೊಬ್ಯಾಕೊ ವರ್ಕ್ಸ್
ಬಸ್ ಟರ್ಮಿನಸ್ ಮೈಸೂರು.

At Opera == From 20–9–46

CHOW - CHOW

* ಎನ್. ಎಸ್. ಕೃಷ್ಣನ್ * ಟಿ. ಎ. ಮಧುರಂ * ಕಾಳಿಯನ್ ರತ್ನಂ
* ದೊರೆರಾಜು * ರಾಜಕಾಂತಂ ಪಾತ್ರವಹಿಸಿರುವ

ಚೌ ಚೌ

ಪ್ರಕಟಣೆ

ಮೈಸೂರು ಪುರನಿವಾಸಿಗಳಿಗೆ ತಿಳಿಯಪಡಿಸುವುದೇನೆಂದರೆ —

ಮೈಸೂರು ಪಟ್ಟಣದಲ್ಲಿ ಆಗುವೆ ಜನನಮರಣದ ವಿವರಗಳನ್ನು ಸಕಾಲಕ್ಕೆ ಮುನಿಸಿಪಲ್ ಹೆಲ್ತ್ ಆಫೀಸರವರ ಆಫೀಸಿಗೆ ಬರುತ್ತಿರುವುದಿಲ್ಲ. ಮುನಿಸಿಪಲ್ ರೆಗ್ಯುಲೇಷನ್ ಮೇರೆಗೆ ಜನನ ಮರಣಗಳ ವಿವರವನ್ನು **ಏಳು ದಿವಸಗಳ** ಒಳಗಾಗಿ ತಂದೆಯಾಗಲೀ, ತಾಯಿಯಾಗಲೀ, ಮನೆಯ ಮಾಲೀಕರಾಗಲೀ, ವೈದ್ಯರಾಗಲೀ, ಸೂಲಗಿತ್ತಿಯರಾಗಲೀ, ಹೆಲ್ತ್ ಆಫೀಸ್‌ರವರಿಗೆ ತಿಳಿಯಪಡಿಸಬೇಕಾಗಿ ಕೋರಿದೆ.

ತಪ್ಪಿದ್ದಲ್ಲಿ ಮುನಿಸಿಪಲ್ ಬ್ಯಾಲಾ 30 ನೇ ಪ್ರಕಾರ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

ಈ ವಿಚಾರದಲ್ಲಿ ಪುರಜನರ ಸಹಕಾರವನ್ನು ಕೋರಲಾಗಿದೆ.

(ಸಹಿ) E. ಅನಂತರಾವ್
ಹೆಲ್ತ್ ಆಫೀಸರ್.